### ಹೆಬ್ಬೆಟ್ಟು

'ಹೆಬ್ಬೆಟ್ಟು' (ಸುಮವೀಣಾ, ಮೇ 26) ಲೇಖನ ಚೆನ್ನಾಗಿದೆ. ಹೆಬ್ಬೆಟ್ಟು, ಹಿಂದೆ ಓದಲು ಬರೆಯಲು ತಿಳಿಯದಿದ್ದ ಅನಕ್ಷರಸ್ಥರು ಮಾತ್ರವೇ ದಾಖಲೆಗೆ ಬಳಸುತ್ತಿದ್ದ ಗುರುತಾಗಿತ್ತು. ಇಂದಿನ ತಾಂತ್ರಿಕ ಯುಗದಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ತಾಂತ್ರಿಕ ಬಳಕೆಯಲ್ಲಿ ಹೆಬ್ಬೆಟ್ಟು ಅನಿವಾರ್ಯವಾಗಿದೆ. ಹೆಬ್ಬೆಟ್ಟಿನ ಬಳಕೆ ಜನರ ಅಸ್ತಿತ್ವದ ಸಂಕೇತವಾಗಿದೆ.

—ಪ್ರಕಾಶ ಮೂಲ್ಕಿ, ಕುಳಾಯಿ

### ಸಂತೂರ್ ಸಂತ

ಸಂತೂರ್ ವಾದನಕ್ಕೆ ವಿಶ್ವವಿಖ್ಯಾತಿ ತಂದುಕೊಟ್ಟವರು ಪಂ. ಶಿವಕುಮಾರ್‌ಶರ್ಮಾ. ಅವರು ಅಗಲಿದ್ದು ಸಂಗೀತ ಲೋಕಕ್ಕೆ ತುಂಬಲಾರದ ನಷ್ಟ. ಅವರು ಸಂಗೀತಪ್ರಪಂಚದಲ್ಲಿ ಹೊಸ ರೀತಿಯ ದಾರಿಯನ್ನೇ ಹುಡುಕಿಕೊಂಡವರು. ಅವರ ಸಂಗೀತ ಮಾತ್ರ ಸಂಗೀತಾಸಕ್ತರಿಗೆ ಹೃದ್ಯವಾಗಿರುತ್ತವೆ.

—ಹರ್ಷ ಎಸ್., ಬೆಂಗಳೂರು

## ಜನಮಾನಸದಲ್ಲಿ 'ಶೋಲೆ'

'ಬಾಲಿವುಡ್ ಭದ್ರಕೋಟೆಗೆ ಏನಾಗಿದೆ' (ವಿಶಾಖ ಎನ್., ಮೇ12) ವಿಶ್ಲೇಷಣೆ ಅಚ್ಚುಕಟ್ಟಾಗಿದೆ. ಒಂದು ವಿಷಯದ ಕುರಿತು ಮಾತ್ರ ನನ್ನ ಅಭಿಪ್ರಾಯ ಭಿನ್ನವಾಗಿದೆ.

'ಶೋಲೆ' ಬಗೆಗೆ ಬರೆಯುವಾಗ 'ಥ್ರಿಲ್ಲರ್ ಸಸ್ಪೆನ್ಸ್ ಹಿಂಸೆಯಿಂದಾಗಿಯೇ ಅದು ಬಹಳ ದಿನಗಳವರೆಗೆ ಜನಮಾನಸದಲ್ಲಿ ನಿಂತಿದೆ' ಎಂಬ ಅಭಿಪ್ರಾಯ ನೀಡಲಾಗಿದೆ. ಇದು ಭಾಗಶಃ ಸತ್ಯವಷ್ಟೇ. ಅದು ಜನಮಾನಸದಲ್ಲಿ ನಿಲ್ಲಲು ಮೂಲ ಕಾರಣ, ಸಲೀಮ್ ಜಾವೇದ್ ಅವರ ಅದ್ಭುತ ಡೈಲಾಗ್‌ಗಳು. ಅಮಿತಾಭ್, ಧರ್ಮೇಂದ್ರರೂ ಈ ಜುಗಲಬಂದಿಯಲ್ಲಿ ಪಾಲುದಾರರಾಗಿದ್ದಾರೆ. ಬಹಳ ವರ್ಷಗಳು ಓಡಿದ ಸಿನೆಮಾಗಳಲ್ಲಿ 'ಶೋಲೆ'ಯೂ ಒಂದು. ಹತ್ತಾರು ಸಾರೆ ನೋಡಿದ ಜನರು ಬಹಳಷ್ಟು ಇದ್ದಾರೆ. ಆದರೆ, ಅವರೆಲ್ಲರಿಗಿಂತ ಹೆಚ್ಚುಸಾರಿ 'ಕೇಳಿದ' ಜನರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಉತ್ತರ ಭಾಗಗಳಲ್ಲಿ, ಒಂದು ದಶಕದ ಕಾಲ ಶೋಲೆಯ ಕ್ಯಾಸೆಟ್ ಕಿವಿಯಲ್ಲಿ ಗುಡುಗುತ್ತಿತ್ತು ಅಥವಾ ಬಾಯಿಂದ ಹೊರಬರುತ್ತಿತ್ತು. ಈಗಲೂ, 'ಶೋಲೆ'ಯ ವರ್ಚಸ್ಸು ಮಾಸಿದೆ ಎನಿಸುವುದಿಲ್ಲ. ಪ್ರಯತ್ನಿಸಿದರೆ, ಐವತ್ತು ವರ್ಷಗಳ ನಂತರವೂ, 'ಶೋಲೆ'ಯ ಡೈಲಾಗ್ ಅನ್ನು ನಾನೂ ಹೇಳಬಹುದೆಂದು ಅನಿಸುತ್ತದೆ.

—ಈಶ್ವರ ಶಾಸ್ತ್ರಿ ಮೋಟಿನಸರ, ಸಿರ್ಸಿ

## ಎಲ್ಲಿ ಹೋಗುವಿರಿ, ನಿಲ್ಲಿ ಜೀವಿಗಳೇ?

'ಎಲ್ಲಿ ಹೋಗುವಿರಿ, ನಿಲ್ಲಿ ಜೀವಿಗಳೇ?' (ಟಿ. ಆರ್. ಅನಂತರಾಮು, ಮೇ 28) ದೀರ್ಘಲೇಖನ ಬಿಚ್ಚಿಟ್ಟ ವಾಸ್ತವ ಪರಿಸ್ಥಿತಿಯನ್ನು ತಿಳಿದು ಮನಸ್ಸಿಗೆ ನೋವಾಯಿತು. ಮನುಜನ ನಾನಾ ದುರಾಸೆಗಳಿಗೆ ಅನ್ಯಜೀವಿಗಳು ಬಲಿಯಾಗುತ್ತ ತಮ್ಮ ಇರುವನ್ನೇ ಕಳೆದುಕೊಳ್ಳುತ್ತಿವೆ. ಈ ರೀತಿಯ ನರನ ಆಕ್ರಮಣ ಮುಂದುವರೆದರೆ ಹಸು, ಎಮ್ಮೆ, ಬೆಕ್ಕು ಮುಂತಾದವುಗಳನ್ನೂ ನಮ್ಮ ಮುಂದಿನ ಪೀಳಿಗೆಯವರು ಚಿತ್ರಗಳಲ್ಲಿ ಮಾತ್ರ ನೋಡುವಂತಾಗುವ ಅಪಾಯ ಇದೆ. ಇನ್ನಾದರೂ ಈ ಭೂಮಿಯ ಮೇಲೆ ಪ್ರತಿ ಜೀವಿಗೂ ಬದುಕುವ ಹಕ್ಕು ಇದೆ ಎಂಬುದನ್ನು ಮನುಷ್ಯ ಮನಗಾಣಲಿ.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಲೇಖನದಲ್ಲಿ ನನ್ನ ಗಮನಕ್ಕೆ ಬಂದಿರುವ ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಮನುಷ್ಯರ ಮೂಲದ ಬಗ್ಗೆ ಹೇಳುವಾಗ 'ಆಸ್ಟ್ರಲೋಪಿತಿಕಸ್' ಮತ್ತು 'ಹೋಮೊಸೇಪಿಯನ್' ನಮ್ಮ ಮೂಲಪುರುಷ ಎಂದು ಉಲ್ಲೇಖಿಸಲಾಗಿದೆ. 'ಮೂಲಪುರುಷ' ಎಂಬ ಬಳಕೆ ಸರಿಯೇ? ಒಬ್ಬ ಮೂಲಪುರುಷನಿಂದ ಮಾನವಕುಲ ಬಂದಿರುವುದು ತರ್ಕಕ್ಕೆ ನಿಲುಕದ್ದು. ಒಂದು ಸಣ್ಣ ಪಂಗಡ, ಪ್ರಗತಿ ಹೊಂದುತ್ತಾ, ಜನ ಸಂಖ್ಯೆಯನ್ನು ವೃದ್ಧಿಗೊಳಿಸಿಕೊಳ್ಳುತ್ತಾ, ಪ್ರಪಂಚದ ಎಲ್ಲಾ ಕಡೆಗೆ ಹರಡಿಕೊಂಡಿತು ಎಂದರೆ ತರ್ಕಕ್ಕೆ ನಿಲುಕುವಂತದ್ದು.

—ಎಂ.ವಿ. ಸತ್ಯನಾರಾಯಣ, ಮೈಸೂರು



ಲೇಖನದಲ್ಲಿ, ಭೂಮಿಯ ಉಗಮದಿಂದ ಇಲ್ಲಿಯವರೆಗೆ ನಡೆದ ಘಟನೆಗಳು ಚಲನಚಿತ್ರದಂತೆ ಮೂಡಿ ಬಂದಿವೆ. ಮಕ್ಕಳಿದ್ದಾಗ ನಾವು ಗೊತ್ತಿಲ್ಲದೆ ತಪ್ಪುಗಳನ್ನು ಮಾಡಿದ್ದೇವೆ. ಅದನ್ನೂ ಲೇಖನ ನೆನಪಿಸಿದೆ.

—ತಿಮ್ಮರಾಜು, ದಾವಣಗೆರೆ

ಮುಖಪುಟ ಲೇಖನ ಓದಿಯಾದ ಮೇಲೆ ದಟ್ಟ ವಿಷಾದ ಮನಸ್ಸಲ್ಲಿ ಉಳಿಯಿತು. ಮನುಷ್ಯರಿಗೆ ಸಹಜೀವಿಗಳನ್ನು ಉಳಿಸಿಕೊಳ್ಳುವ ಮತಿ ಸಿಗಲಿ ಎಂದು ಮನಸ್ಸು ಪ್ರಾರ್ಥಿಸಿಕೊಂಡಿತು.

—ವಸುಂಧರಾ ಕದಲೂರು

### ನಿಲ್ಲಿ (ಸಿ)!

ಜೀವದಾಯಕ ಮರಗಳನ್ನೇಕೆ ಕೊಲ್ಲುವಿರಾ? ನಿಲ್ಲಿ(ಸಿ) ದುಷ್ಟರೇ! ಎಂಬುದೂ ನಮ್ಮ ಘೋಷಣೆಯಾಗಬೇಕು.

—ಸಿಪಿಕೆ. ಮೈಸೂರು



### ಕೊನೆಯ ಕಾವ್ಯ

'ಕೊನೆಯ ಕಾವ್ಯ' (ಆಯೇಷಾ, ಮೇ 26) ಚಿತ್ರಪಟ ಕಥನ ತುಂಬ ಚೆನ್ನಾಗಿತ್ತು. ಕೆ.ಎಸ್. ರಂಗನಾಥ್ ಅವರ ಕುರಿತು ತಿಳಿದು ತುಂಬ ಖುಷಿಯಾಯ್ತು. ಎಷ್ಟೊಂದು ಸುಂದರವಾಗಿವೆ ಅವರು ತೆಗೆದಿರುವ ಛಾಯಾಚಿತ್ರಗಳು ಅದ್ಭುತವಾಗಿವೆ. ಕೊನೆಯ ಕಾವ್ಯವಾದರೂ ಅವರು ಶಾಶ್ವತವಾಗಿ ಇರುವಂಥ ಕಾವ್ಯವನ್ನೇ ಬರೆದಿದ್ದಾರೆ.

—ಜ್ಯೋತಿ ಅಜಯ್, ಮೈಸೂರು

### ಅಳಿದ ಮೇಲೂ ಉಳಿದ ಸಾಧಕ

'ಅಳಿದ ಮೇಲೂ ಉಳಿದ ಸಾಧಕ' (ಪ್ರವೀಣ ಕುಲಕರ್ಣಿ, ಮೇ 26) ಲೇಖನ ಓದಿ ಕಣ್ಣುಗಳು ಮಂಜಾದವು. ಎಷ್ಟು ಚಿಕ್ಕ ವಯಸ್ಸಿಗೆ ಎಂಥ ಚಿತ್ರಗಳನ್ನು ದಾಖಲಿಸಿ ಅಗಲಿಹೋಗಿದ್ದಾರೆ ಅವರು. ಇನ್ನಷ್ಟು ಕಾಲ ಬದುಕಿದ್ದರೆ ಅವರಿಂದ ಇನ್ನೂ ದೊಡ್ಡ ಸಾಧನೆಗಳನ್ನು ನಿರೀಕ್ಷಿಸಬಹುದಿತ್ತೇನೋ. ಆದರೆ ಅವರು ಹುಟ್ಟುಹಾಕಿದ ಸ್ಫೂರ್ತಿ ಖಂಡಿತ ಫಲಕೊಡುವುದು.

—ಕೃಷ್ಣಮೂರ್ತಿ ಕೆ.ಆರ್., ದಾಂಡೇಲಿ

### ಪಾಸು-ಫೇಲು! ಮುಂದೇನು ಬಾಳು

'ಪಾಸು–ಫೇಲು! ಮುಂದೇನು ಬಾಳು' (ಎಚ್. ಎಸ್. ಸತ್ಯನಾರಾಯಣ, ಮೇ 26) ಬರಹ ತುಂಬ ಚೆನ್ನಾಗಿದೆ. ನಮ್ಮೆಲ್ಲರ ಬದುಕಿನ ನೆನಪುಗಳನ್ನೂ ಮರುಕಳಿಸುವ ಹಾಗಿದೆ. ಶಿಕ್ಷಣ ಅನ್ನುವುದು ನಮ್ಮ ಅರಿವನ್ನು ರೂಪಿಸಿಕೊಳ್ಳುವ ದಾರಿಯಾಗಬೇಕಿತ್ತು. ಆದರೆ ಅದು ಬರೀ ಹಣ ಗಳಿಕೆಯ ಸಲಕರಣೆಯಷ್ಟೇ ಆಗಿಬಿಟ್ಟಿದೆ. ಈ ಲೇಖನ ಶಿಕ್ಷಣ ವ್ಯವಸ್ಥೆಯ ಕುರಿತೂ ಪರೋಕ್ಷವಾಗಿ ಮಾತನಾಡುತ್ತದೆ.

—ರಾಘವ ನಾಯಕ್, ಮುಂಬೈ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in